


## ಪರಿಸರ ಕಾಳಜಿಯ ‘ವಾಟರ್ ಎಟಿಎಂ’

ಪರಿಸರ ಮಾಲಿನ್ಯಗೊಳ್ಳಲು ಪ್ಲಾಸ್ಟಿಕ್ ಬಳಕೆ ಬಹುಮುಖ್ಯ ಕಾರಣ. ಪ್ಲಾಸ್ಟಿಕ್ ಬಳಕೆ ಕುರಿತ ಮನಸ್ಥಿತಿ ಹೀಗೆ ಮುಂದುವರೆದರೆ ಇಡೀ ಜಗತ್ತೇ ಮುಂದೊಂದು ದಿನ, ಎಂದಿಗೂ ಕೊಳೆಯದ ಮತ್ತು ವಿಷಕಾರಿ ರಾಸಾಯನಿಕ ಹೊರಸೂಸುವ ಪ್ಲಾಸ್ಟಿಕ್ ತ್ಯಾಜ್ಯಗಳಿಂದ ಆವರಿಸುತ್ತದೆ. ಈ ಆಪತ್ತನ್ನು ದೂರವಾಗಿಸುವ ಸಣ್ಣ ಪ್ರಯತ್ನವು ಊಟಿಯಲ್ಲಿ ‘ವಾಟರ್ ಎಟಿಎಂ’ ಮೂಲಕ ಪರಿಣಾಮಕಾರಿಯಾಗಿ ನಡೆಯುತ್ತಿರುವುದು ಶ್ಲಾಘನೀಯ.

ಪಾನೀಯ ಮತ್ತು ನೀರನ್ನು ಬಳಸಿದ ಬಳಿಕ ಪ್ಲಾಸ್ಟಿಕ್ ಬಾಟಲಿಗಳನ್ನು ಬಿಸಾಡುವ ಪ್ರವೃತ್ತಿ ನಮ್ಮಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪ್ರವಾಸಿ ತಾಣಗಳಲ್ಲಂತೂ ಇದು ಹೆಚ್ಚು. ಊಟಿಯಲ್ಲೂ ಇದೇ ಪರಿಸ್ಥಿತಿ. ಇದರಿಂದ ಎಚ್ಚೆತ್ತುಕೊಂಡಿರುವ ಅಲ್ಲಿನ ಆಡಳಿತ ವ್ಯವಸ್ಥೆಯು ಅಗತ್ಯವಿರುವೆಡೆ ‘ವಾಟರ್ ಎಟಿಎಂ’ಗಳನ್ನು ಸ್ಥಾಪಿಸಿದೆ. ಈ ಎಟಿಎಂಗಳಲ್ಲಿ ಒಂದು ರೂಪಾಯಿ ಪಾವತಿಸಿದರೆ, ಸಾಮಾನ್ಯ ಎಟಿಎಂನಲ್ಲಿ ಹಣ ಸಿಕ್ಕ ಹಾಗೆ ಐದು ಲೀಟರ್ ನೀರು ದೊರೆಯುತ್ತದೆ.

ಜೊತೆಗೆ ಅರ್ಧ, ಒಂದು ಹಾಗೂ ಎರಡು ಲೀಟರ್‌ನ ನೀರಿನ ಪ್ಲಾಸ್ಟಿಕ್ ಬಾಟಲಿಗಳು ಈ ಪ್ರದೇಶದಲ್ಲಿ ಮಾರಾಟಕ್ಕೆ ಲಭ್ಯವಿಲ್ಲ. 5 ಲೀಟರ್ ವಾಟರ್‌ನ ಪ್ಲಾಸ್ಟಿಕ್ ಬಾಟಲಿಗಳನ್ನು ಮಾತ್ರ ಇಲ್ಲಿ ಕಾಣಬಹುದು. ಇನ್ನು ಅರ್ಧ, ಒಂದು, ಎರಡು ಲೀಟರ್‌ನ ಗಾಜಿನ ವಾಟರ್ ಬಾಟಲಿಗಳು ಲಭ್ಯವಿದ್ದು, ಬಾಟಲಿಯಲ್ಲಿನ ನೀರು ಖಾಲಿಯಾದ ಬಳಿಕ ಆ ಗಾಜಿನ ಬಾಟಲಿಯನ್ನು ಸ್ಥಳೀಯ ಅಂಗಡಿಗಳಿಗೆ ನೀಡಿದರೆ ಬಾಟಲಿಯ ಅರ್ಧ ಬೆಲೆ ವಾಪಸ್ ನೀಡುತ್ತಾರೆ.

ಪ್ಲಾಸ್ಟಿಕ್ ವಿಚಾರದಲ್ಲಿ ಇಂಥದ್ದೊಂದು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಖ್ಯ ಕಾರಣ ಇಲ್ಲಿನ ಆಡಳಿತ ವ್ಯವಸ್ಥೆ, ಇದಕ್ಕೆ ಸಾರ್ವಜನಿಕರ ಒಮ್ಮನಸ್ಸಿನ ಸಹಕಾರವೂ ಇದೆ. ಇಂಥದ್ದೊಂದು ಕ್ರಮ ಪಕ್ಕದ ತಮಿಳುನಾಡಿನ ಊಟಿಯಲ್ಲಿ ಸಾಧ್ಯವಾದರೆ ನಮ್ಮ ರಾಜ್ಯದಲ್ಲೇಕೆ ಸಾಧ್ಯವಿಲ್ಲ?

—ಎಚ್.ಎಸ್. ನವೀನ ಕುಮಾರ್, ಹೊಸದುರ್ಗ

## ಅನ್ನದ ಕಲ್ಲಿನ ತೊಟ್ಟಿ

ಅನುರಾಧಪುರ ಪುರಾತನ ಶ್ರೀಲಂಕಾದ ಬೌದ್ಧ ರಾಜರ ರಾಜಧಾನಿಯಾಗಿತ್ತು. ಅಂದಿನ ಕಾಲದ ಬೌದ್ಧ ಸ್ತೂಪಗಳ ಸ್ಮಾರಕಗಳಲ್ಲಿ ‘ಮಹಾವಿಹಾರ ಆಲಮ್ಸ್ ಸಭಾಂಗಣವೂ’ ಒಂದು. ಈ ಕಲ್ಲಿನ ಅನ್ನದ ತೊಟ್ಟಿ ಇಂದಿಗೂ ಹಾಗೇ ಇದೆ. ಸ್ಥಳೀಯ ಮಾಹಿತಿ ಫಲಕದ ಅನುಸಾರ ದೇವನಾಂಪ್ರಿಯ ಟಿಸ್ಸ ರಾಜನ ಆಡಳಿತದ ಕಾಲ ಕ್ರಿಸ್ತಪೂರ್ವ ಮೂರನೇ ಶತಮಾನದಲ್ಲಿ ಈ ಸಭಾಂಗಣ ಮತ್ತು ಈ ಕಲ್ಲಿನ ಅನ್ನದ ತೊಟ್ಟಿಯನ್ನು ನಿರ್ಮಿಸಿದ್ದು. ಇಲ್ಲಿ ಬೌದ್ಧ ಬಿಕ್ಕುಗಳಿಗೆ ತರಬೇತಿ ನೀಡಲಾಗುತ್ತಿತ್ತಂತೆ. ಚಿತ್ರದಲ್ಲಿ ಕಾಣುತ್ತಿರುವ ಕಲ್ಲಿನಿಂದ ನಿರ್ಮಿಸಿದ ಆಯತಾಕಾರದ ಈ ತೊಟ್ಟಿ ಸುಮಾರು 45 ಅಡಿ ಉದ್ದ, ಎರಡು ಅಡಿ ಒಳಾಯ ಇದೆ. ತೊಟ್ಟಿಯ ಒಳಭಾಗಕ್ಕೆ ತಾಮ್ರದ ತಗಡಿನ ಲೇಪನವಿತ್ತಂತೆ. ಈಗ ಅದೇನು ಇಲ್ಲ. ಇದರಲ್ಲಿ ಒಮ್ಮೆ ಶೇಖರಿಸಿದ ಅನ್ನವನ್ನು ಸುಮಾರು 3000 ಬೌದ್ಧ ಬಿಕ್ಕುಗಳಿಗೆ ಬಡಿಸುತ್ತಿದ್ದರಂತೆ.

—ಪಿ.ಎಚ್. ಪಾಟೀಲ್



## 200 ವರ್ಷ ಇತಿಹಾಸದ ಪಾತ್ರೆಗಳು

ಚಿತ್ರದಲ್ಲಿ ಕಾಣುತ್ತಿರುವ ಪಾತ್ರೆಗಳಿಗೆ ಸುಮಾರು 200 ವರ್ಷಗಳಷ್ಟು ಇತಿಹಾಸವಿದೆ. ಹಿಂದಿನ ಕಾಲದಲ್ಲಿ ಮನೆಗಳಲ್ಲಿ ಉಪಯೋಗಿಸುತ್ತಿದ್ದ ಹಿತ್ತಾಳೆ, ಕಂಚು, ತಾಮ್ರದ ಪಾತ್ರೆಗಳಿವು. ಮರದಿಂದ ಮಾಡಿದ ಮರದ ಮರಿಗೆ, ಸೇಮಿಗೆ (ಶ್ಯಾವಿಗೆ) ಒತ್ತು ಮಣೆ, ಬೆತ್ತದ ಪೆಟ್ಟಿಗೆ ಜೊತೆಗೆ ನೂರು ವರ್ಷಗಳ ಪಂಚಾಂಗಗಳು ಇಲ್ಲಿವೆ. ಸಂಸ್ಕೃತ, ಕನ್ನಡ, ಮರಾಠಿ, ಹಿಂದಿ ಭಾಷೆಗಳ ಅಪೂರ್ವ ಪುಸ್ತಕಗಳನ್ನೂ ಇಲ್ಲಿ ಕಾಣಬಹುದು. ಅಷ್ಟಕ್ಕೂ ಇವೆಲ್ಲವೂ ಕಂಡಿದ್ದು ಎಲ್ಲಿ ಅಂತೀರಾ? ಇವೆಲ್ಲವೂ ಒಟ್ಟಿಗೆ ಕಂಡದ್ದು ಕಾಸರಗೋಡಿನ ಕೋಟೆ ರಸ್ತೆ ನಿವಾಸಿ ಕೆ. ರಾಮಚಂದ್ರ ಶೆಣೈ ಅವರ ‘ರಾಮ್ ಗೀತ್’ ನಿವಾಸದಲ್ಲಿ. ಈ ಎಲ್ಲ ವಸ್ತುಗಳನ್ನು ಮನೆಯ ಕೋಣೆಯೊಂದರಲ್ಲಿ ವ್ಯವಸ್ಥಿತವಾಗಿ ಇರಿಸಿದ್ದು, ಮನೆಗೆ ವಸ್ತು ಸಂಗ್ರಹಾಲಯದ ಮೆರುಗು ನೀಡಿದ್ದಾರೆ.

—ಕೆ. ರಾಮದಾಸ ಶೆಣೈ, ಕಾಸರಗೋಡು

